## 13. ಸೋಂಕು ದುಪ್ಪಟ್ಟು ಅವಧಿ ದ್ವಿಗುಣ

ಲಾಕ್‌ಡೌನ್ ಹೇರಿಕೆಗೂ ಮುನ್ನ ಕೇವಲ ಮೂರು ದಿನದಲ್ಲಿ ಕೊರೊನಾ ವೈರಾಣು ಸೋಂಕಿತರ ಸಂಖ್ಯೆಯು ದುಪ್ಪಟ್ಟಾಗುತ್ತಿತ್ತು. ಆದರೆ, ಈಗ ಸೋಂಕಿತರ ಸಂಖ್ಯೆ ದುಪ್ಪಟ್ಟಾಗಲು 6.2 ದಿನಗಳು ಬೇಕಾಗುತ್ತಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೋವಿಡ್ ಬಾಧಿತರು ಗುಣಮುಖರಾಗುತ್ತಿರುವ ಸಂಖ್ಯೆ ಮತ್ತು ಸಾವಿನ ಸಂಖ್ಯೆಯ ಅನುಪಾತದಲ್ಲಿ ಭಾರತದ ಸ್ಥಿತಿಯು ಹಲವು ದೇಶಗಳಿಗಿಂತ ಉತ್ತಮವಾಗಿದೆ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದ್ದಾರೆ.

ಕರ್ನಾಟಕ, ಕೇರಳ, ತಮಿಳುನಾಡು ಸೇರಿ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಕರಣಗಳು ದ್ವಿಗುಣಗೊಳ್ಳುತ್ತಿರುವ ದರವು ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ. ಕೋವಿಡ್‌ಗೆ ಒಳಗಾದ ಶೇ. 80ರಷ್ಟು ರೋಗಿಗಳು ರೋಗಮುಕ್ತರಾಗುತ್ತಿದ್ದಾರೆ. ಶೇ.20ರಷ್ಟು ಪ್ರಕರಣಗಳಲ್ಲಿ ಮಾತ್ರ ಸಾವು ವರದಿಯಾಗುತ್ತಿದೆ. ಆ್ಯಂಟಿಬಾಡಿ ಪರೀಕ್ಷೆಯ ಐದು ಲಕ್ಷ ಕಿಟ್‌ಗಳು ಚೀನಾದಿಂದ ಬಂದಿವೆ. ಅವುಗಳನ್ನು ರಾಜ್ಯಗಳಿಗೆ ವಿತರಿಸಲಾಗುವುದು. ಹೆಚ್ಚು ಪ್ರಕರಣಗಳನ್ನು ಹೊಂದಿರುವ ರಾಜ್ಯಗಳಿಗೆ ಆದ್ಯತೆಯಲ್ಲಿ ಹಂಚಲಾಗುವುದು ಎಂದು ಅವರು ಹೇಳಿದ್ದಾರೆ.

**ಪರೀಕ್ಷೆ ಹೆಚ್ಚಳ:** ದೇಶದಲ್ಲಿ ಕೊರೊನಾ ಪರೀಕ್ಷೆಯು ಗಣನೀಯವಾಗಿ ಏರಿಕೆಯಾಗುತ್ತಿದೆ. ಈವರೆಗೆ, 3.19 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ವಿಜ್ಞಾನಿ ಡಾ:ರಾಮನ್ ಆರ್.ಗಂಗಾಖೇಡ್ಕರ್ ತಿಳಿಸಿದ್ದಾರೆ.

ಒಂದೇ ದಿನ 28,340 ಪರೀಕ್ಷೆಗಳು ನಡೆದಿವೆ. ಅವುಗಳ ಪೈಕಿ 23,932 ಪರೀಕ್ಷೆಗಳು ಐಸಿಎಂಆರ್‌ನ ಜಾಲದಲ್ಲಿರುವ ಪ್ರಯೋಗಾಲಯಗಳಲ್ಲಿ ನಡೆದಿವೆ. ಉಳಿದವುಗಳನ್ನು 80 ಖಾಸಗಿ ಪ್ರಯೋಗಾಲಯಗಳಲ್ಲಿ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ.

**ಬಳಸಿದ ವೆಂಟಿಲೇಟರ್ ಆಮದಿಗೆ ಅನುಮತಿ:** ಬಳಸಿದ ವೆಂಟಿಲೇಟರ್‌ಗಳನ್ನು ಆಮದು ಮಾಡಿಕೊಳ್ಳಲು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಅನುಮತಿ ನೀಡಿದೆ. ಬಳಸಿದ ವೆಂಟಿಲೇಟರ್‌ಗಳ ಆಮದಿನ ಮೇಲೆ ನಿಷೇಧ ಹೇರಿ ಸಚಿವಾಲಯವು 2008ರಲ್ಲಿಯೇ ಆದೇಶ ಹೊರಡಿಸಿತ್ತು. ಆದರೆ, ಈಗ ಕೋವಿಡ್ ಬಾಧೆಯಿಂದಾಗಿ ದೇಶದಲ್ಲಿ ವೆಂಟಿಲೇಟರ್‌ಗಳ ಕೊರತೆ ತೀವ್ರವಾಗಿದೆ.

ಮೂರು ವರ್ಷಕ್ಕಿಂತ ಹಳೆಯದಾದ ವೈದ್ಯಕೀಯ ಉಪಕರಣಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳ ಆಮದಿಗೆ ತಡೆ ಒಡ್ಡುವ ಅಪಾಯಕಾರಿ 'ತ್ಯಾಜ್ಯ ನಿಯಮ'ವನ್ನು 2008ರಲ್ಲಿ ಜಾರಿಗೆ ತರಲಾಗಿತ್ತು.

ಈಗ ಈ ನಿಯಮವನ್ನು ಬದಲಾಯಿಸಲಾಗಿದೆ. ಈಗಾಗಲೇ ಆಮದಾಗಿ ಬಂದರುಗಳಲ್ಲಿ ಉಳಿದಿರುವ ವೆಂಟಿಲೇಟರ್‌ಗಳನ್ನು ಬಳಸುವುದಕ್ಕೂ ಅನುಮತಿ ದೊರೆಯಲಿದೆ. ಬಳಸಿದ 200 ವೆಂಟಿಲೇಟರ್‌ಗಳನ್ನು ಚೆನ್ನೈನ ಕಂಪೆನಿಯೊಂದು 2018ರಲ್ಲಿ ಅಮೆರಿಕದಿಂದ ಆಮದು ಮಾಡಿಕೊಂಡಿತ್ತು. ಆದರೆ, ನಿಷೇಧದ ಕಾರಣಕ್ಕೆ, ಅದನ್ನು ಬಂದರಿನಿಂದ ಹೊರಗೆ ತರುವುದಕ್ಕೆ ಸಾಧ್ಯವಾಗಿರಲಿಲ್ಲ. ಈಗ, ಅದನ್ನೂ ಹೊರಗೆ ತಂದು ಬಳಸಬಹುದಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:16.04.2020